



ಅನ್ನಪೂರ್ಣಾರ ಒಡಲಲ್ಲಿದ್ದ ಅಪೂರ್ವ ಸಂಗೀತದ ಅಸಾಧಾರಣ ಚೈತನ್ಯ ಅಪರೂಪ ಎನಿಸುವಂಥದ್ದು. ತಂದೆಯಂತೆ ಅವರೂ ಬಹು ದೊಡ್ಡ ಕಲಾವಿದೆ ಹಾಗೂ ಮಹಾನ್ ಗುರು. ಹಿಂದುಸ್ತಾನಿ ಸಂಗೀತಕ್ಷೇತ್ರದ ಅತ್ಯುತ್ಕೃಷ್ಟ ವಾದಕಿ. ಮೂಲತಃ ಸುರ್‌ಬಹಾರ್‌ವಾದಕಿಯಾದರೂ ಸಿತಾರ್‌ನಲ್ಲಿ ಅವರಿಗೆ ಅಪಾರ ಪರಿಣತಿಯಿತ್ತು. ಅವರ ಸಂಗೀತವನ್ನು ಕೇಳಿರುವವರು ಎಲ್ಲೋ ಕೆಲವೇ ಕೆಲವರು. ಅವರ ಸಂಗೀತವನ್ನು ಕೇಳುವ ಭಾಗ್ಯ ದೊರಕಿದ್ದು ಅವರ ಕೆಲವು ಶಿಷ್ಯರಿಗೆ ಮಾತ್ರ. ಹರಿಪ್ರಸಾದ್ ಚೌರಾಸಿಯ, ನಿಖಿಲ್ ಬ್ಯಾನರ್ಜಿ, ನಂತರದಲ್ಲಿ ನಿತ್ಯಾನಂದ ಹಲ್ದೀಪುರ್, ಬಸಂತ್ ಕಾಬ್ರ, ಅಶೀಶ್ ಖಾನ್ ಮೊದಲಾದ ಪ್ರತಿಭಾವಂತ ಶಿಷ್ಯರನ್ನು ಕೊಡುಗೆ ನೀಡಿದ ಖ್ಯಾತಿ ಇವರದು. ಖ್ಯಾತ ಸರೋದ್‌ವಾದಕ ರಾಜೀವ್ ತಾರಾನಾಥ್ ಕೂಡ ಇವರಲ್ಲಿ ಅಭ್ಯಾಸ ಮಾಡಿದ್ದಾರೆ.

ಅನ್ನಪೂರ್ಣಾದೇವಿಯವರಲ್ಲಿ ಕೆಲಕಾಲ ಕಲಿತಿದ್ದ ಪಂಡಿತ್ ರಾಜೀವ್ ತಾರಾನಾಥರು ಅವರ ಪಾಠವನ್ನು ನೆನಪಿಸಿಕೊಂಡಿರುವುದು ಹೀಗೆ: “ಅನ್ನಪೂರ್ಣಾ ದೀದಿ ಬಹಳ ದೊಡ್ಡ ಗುರುಗಳು. ಅವರು ಒಂದೊಂದು ಅಕ್ಷರ, ಒಂದೊಂದು ಚಲನ್ ಪರಿಪೂರ್ಣವಾಗಿ, ಪಕ್ಕಾ ಬರುವವರೆಗೆ ಬಿಡ್ತಾನೇ ಇರಲಿಲ್ಲ. ಆ ಗಮಕ ಅಷ್ಟೇ ಬರಬೇಕು. ಅಲ್ಲಿ ಪ್ರತಿಯೊಂದು ಸ್ವರವೂ ಶುದ್ಧವಾಗಿ ಬರಬೇಕು. ಅದು ಬರೋವರೆಗೆ ನುಡಿಸ್ತಾನೆ ಇರಬೇಕಿತ್ತು. ಅವರು ಸಿಕ್ಕಾಪಟ್ಟೆ ಕಟ್ಟುನಿಟ್ಟು, ಆದರೆ ಅಷ್ಟೇ ಸ್ವೀಟ್, ಅದ್ಯಾವುದೋ ಒಂದು ಚಲನ್, “ನೀನು ಅದನ್ನು ನುಡಿಸಬೇಕು. ಅದು ಕೈಯಲ್ಲಿ ಬರೋತನಕ ನೀನು ಊಟ ಮಾಡಬೇಡ. ಆಗ ಬರುತ್ತೆ ನೋಡು. ಇದಕ್ಕೆ ಸೀರಿಯಸ್‌ನೆಸ್ ಇರಬೇಕು. ಆಗ ಹಸಿವಿನ ಹಾಗೆ ಬರುತ್ತೆ ನೋಡು” ಎನ್ನೋವ್ರು. ಇವೆಲ್ಲವನ್ನೂ ಬಹಳ ನಗುನಗುತ್ತಾ ಹೇಳೋರು. ಆದರೆ ನಂತರ ಅದೆಂತಹ ಆರ್ದ್ರತೆ, ಮಾರ್ದವ. ಅವರಲ್ಲಿದ್ದ **thoroughness of knowledge, thoroughness of involvement, thoroughness of treatment** ಇದನ್ನೇ ಅವರು ಉಳಿದವರಿಂದಲೂ ನಿರೀಕ್ಷಿಸುತ್ತಿದ್ದರು. ಅವರು ಎಲ್ಲವನ್ನೂ ಹಾಡಿ ತೋರಿಸುತ್ತಿದ್ದರು. ಅವರ ಕಂಠ ಕೋಗಿಲೆಯಂತಿತ್ತು. ಅವರ ಕಂಠವನ್ನು ಕೇಳಿದರೆ ಅವರಿಗೆ ಅಷ್ಟೊಂದು ವಯಸ್ಸಾಗಿದೆ ಎಂದು ಹೇಳುವುದಕ್ಕೇ ಸಾಧ್ಯವಿರಲಿಲ್ಲ.”

ವಿದ್ಯಾರ್ಥಿಗಳ ಮಟ್ಟಿಗೆ ಅವರು ತಾಯಿ. ಅನ್ನಪೂರ್ಣಾದೇವಿಯನ್ನು ಅವರೆಲ್ಲರೂ ‘ಮಾ’ ಎಂದೇ ಕರೆಯುತ್ತಿದ್ದರು. ಅವರನ್ನು ಸಂತರೆಂದೇ ಭಾವಿಸಿದ್ದರು. ಒಮ್ಮೆ ರಾಜೀವ್ ತಾರಾನಾಥರು ಕಲ್ಕತ್ತೆಯಲ್ಲಿ ಸರೋದ್ ಕಲಿಯುತ್ತಿದ್ದಾಗ ಅವರಿಗೆ ಅಮೀಬಿಕ್ ಡಿಸೆಂಟ್ರಿ ಆಗಿ, ತುಂಬಾ ಸುಸ್ತಾಗಿದ್ದರು. ಡಾಕ್ಟರ್ ಬಳಿ ಹೋಗಲೂ ಕಾಸಿರಲಿಲ್ಲ. ಸರೋದ್ ಮಾರಿ ಮೈಸೂರಿಗೆ ವಾಪಸ್ಸಾಗುವ ಯೋಚನೆಯಲ್ಲಿದ್ದರು. ವಿಷಯ ತಿಳಿದ ಅನ್ನಪೂರ್ಣಾ ದೀದಿ ತಾರಾನಾಥರನ್ನು ಕರೆದು, “ಡಾಕ್ಟರಿಗೆ ಹೇಳಿದ್ದೇನೆ, ಅವರ ಹತ್ತಿರ ಹೋಗು. ಅವರು ನಿನಗೆ ಔಷಧಿ ಕೊಡ್ತಾರೆ. ಏನು ಮಾಡ್ಬೇಕು ಅಂತ ಹೇಳ್ತಾರೆ. ನೀನು ವಾಪಸ್ಸು ಬೆಂಗಳೂರಿಗೆ ಹೋಗುತ್ತಿಲ್ಲ” ಅಂತ ದೃಢವಾಗಿ ಹೇಳಿದರಂತೆ. “ಮೊಸರು ಬಳಸು” ಅಂತ ಹಣವನ್ನು ಕೊಟ್ಟರು. “ಆಮೇಲೂ ಮೊಸರಿಗೆಂದು ಅಕ್ಕರೆಯಿಂದ ಹಣ ಕೊಡ್ತಿದ್ರು. ನನಗೆ ಸರೋದ್ ಮುಂದುವರಿಸೋದಕ್ಕೆ ಸಾಧ್ಯವಾದದ್ದೇ ಅವರ ತಾಯಿಮಮತೆಯಿಂದ,” ಅಂತ ತಾರಾನಾಥರು ಸದಾ ನೆನಪಿಸಿಕೊಳ್ಳುತ್ತಾರೆ.

ಅವರಿಗೆ ವಾದ್ಯದ ಮೇಲಿದ್ದ ಹಿಡಿತ ಹಾಗೂ ಸಂವಹನ ಸಾಮರ್ಥ್ಯವನ್ನು ಅವರ ವಿದ್ಯಾರ್ಥಿಗಳು ತುಂಬ ಗೌರವದಿಂದ ನೆನೆಯುತ್ತಾರೆ. ಕಲಿಸುವ ವಿಷಯದಲ್ಲಿ ಮಾತ್ರ ಅವರು ಯಾವ ರಾಜಿಗೂ ಸಿದ್ಧರಿರಲಿಲ್ಲ.

ಅನ್ನಪೂರ್ಣಾದೇವಿ ಶುದ್ಧ, ಅಪ್ಪಟ, ಅಪರಂಜಿಯಂತಹ ಸಂಗೀತದ ಒಡತಿ. ಅನ್ನಪೂರ್ಣಾದೇವಿಯವರು ಕಾಲಾತೀತವಾದ, ತೀರಾ ಶ್ರೀಮಂತವಾದ, ಸಾಂಪ್ರದಾಯಿಕ ಸಂಗೀತದ ಕಣಜ. ಅದರ ವಾಹಕರಾಗಿ, ಜೀವಂತ ಸಂಕೇತವಾಗಿ, ಝಗಮಗಿಸುವ ಸಾರ್ವಜನಿಕ ವೇದಿಕೆಗೆ ವಿಮುಖರಾಗಿ ಬದುಕಿದ್ದ ಅವರು ಇಂದು ನಮ್ಮೊಂದಿಗಿಲ್ಲ. ಅವರನ್ನು ಕುರಿತ ಕಥೆಗಳು, ಅವರನ್ನು ಪ್ರೀತಿಯಿಂದ ನೆನೆಯುವ, ಅವರ ಸಂಗೀತವನ್ನು ಮುಂದಕ್ಕೆ ಒಯ್ಯುತ್ತಿರುವ ಅವರ ಶಿಷ್ಯರು ಹಾಗೂ ಅವರ ಒಂದೆರಡು ಧ್ವನಿಮುದ್ರಣಗಳಲ್ಲಿ ಅವರನ್ನು ನಾವಿಂದು ಕಾಣಬೇಕಿದೆ.